# ನೀವು ಕಂಡಿರೆ ನೀವು ಕಂಡಿರೆ... ದ್ಯಾವಕ್ಕನ ಮಗನ...

ಅಲ್ಲೇ ಕುಳಿತಿದ್ದ ದ್ಯಾವಕ್ಕನ ತೋರುತ್ತಾ ಗವಿರಂಗಣ್ಣ ‘ನೋಡ್ಲಾ ಶೆಟ್ಟಿ’ ಎನ್ನುತ್ತಿದ್ದಂತೆ ಅತ್ತ ತಿರುಗಿ ನೋಡಿದ. ‘ಈ ಸಿದ್ದುನ್ಮಗ ಎಲ್ಲೋ ಓಗ್ಬುಟೈತೆ. ಈವಮ್ಮನ ಗೋಳು ಕಣ್ಣಲ್ಲಿ ನೋಡಕಾಗ್ತಿಲ್ಲ, ಎಲ್ಲೋತೋ ಏನೋ’ ಎಂದು ನಿಟ್ಟುಸಿರು ಬಿಟ್ಟ. ‘ಊ ಕಣಣ್ಣ ಈಗ ತಾನೇ ಆ ಕಡೆಯಿಂದ ಬರುವಾಗ ನಮ್ಮ ನಿಂಗ ಸಿಕ್ಕಿ ಹೇಳಿದ. ನೀವು ಅಲ್ಲೆಲ್ಲೋ ಓದಕ್ಕೆ ಹಾಕ್ತೀನಿ ಅಂದಿದ್ರಂತೆ’ ಅಂತನೂ ಹೇಳಿದ.

‘ಊ ಕಣೊ... ನಾಳೆ ತುಮಕೂರಿಗೆ ಹೋಗಬೇಕಿತ್ತು, ಈ ಹುಡುಗನೇ ಪತ್ತೆ ಇಲ್ಲ’ ಅಂದೋನು ಮೌನವಾದ. ಥಟ್ಟನೆ ಶಂಕರಶೆಟ್ಟಿಗೆ ಅದ್ಯಾವುದೋ ಊರಿಗೆ ದಾಸಪ್ಪನಿಗೆ ಹೋದಾಗ ಅಲ್ಲಿ ನೆರೆಹೊರೆಯವರು ಹೇಳಿದ ಕಥೆ ನೆನಪಾಗಿ...

‘ಅಣ್ಣ ಇಂಗೆ ಒಂದೂರಾಗ ಒಂದ್ಮೊಗ ಕಾಣೆಯಾಗಿತ್ತಂತೆ. ಅದರ ತಂದೆ ತಾಯಿ ಹುಡ್ಕೀ ಹುಡ್ಕೀ ಎರಡ್ಮೂರ್ ವರ್ಷ ಕಳದ್ಮೇಲೆ ಎಲ್ಲೂ ಸಿಗದೆ ದುಃಖ ಪಟ್ಟುಕೊಂಡು ಸುಮ್ಮನಾಗಿಬಿಟ್ಟಿದ್ದರು. ಒಂದು ದಿನ ಆ ಊರಿನ ಒಬ್ಬ ಗೌಡ ಎತ್ತುಗಳ ತರೋಕೆ ಅಂತ ಮಂಡ್ಯಾದ ಕಡೆ ಹೋಗಿದ್ದಾಗ ಈ ಹುಡುಗ ಅವರ ಕಣ್ಣಿಗೆ ಬಿತ್ತಂತೆ. ಏನು ಎತ್ತ ಅಂತ ವಿಚಾರಿಸಿ ನೋಡಿದರೆ, ಮಂಡ್ಯದ ಹಳ್ಳಿಯೊಂದರ ಗೌಡರ ಮನೇಲಿ ದನ ಮೇಯಿಸ್ಕಂಡು ಐತೆ ಅಂತ ಗೊತ್ತಾಯಿತು. ಈ ಎತ್ತುಗಳ ತರಕ್ಕೆ ಬಂದ ಗೌಡ್ರು, ಮಗ ಕಳಕಂಡ ಆ ತಂದೆ ತಾಯಿ ಊರಿಗೆ ಬಂದು ಹೇಳಿದ್ರಂತೆ.

ಅಲ್ಲೋಗಿ ನೋಡಿದ್ರೆ ಅದು ನಿಜಾನೆ ಆಗಿತ್ತು. ಈ ಇಬ್ರೂ ತಂದೆ ತಾಯಿಗಳು ಹೋಗಿ, ‘ಸ್ವಾಮಿ, ಇದು ನಮ್ದೇ ಮಗ, ನಿಮ್ಮ ದಮ್ಮಯ್ಯ ಅಂತೀನಿ ಕಳಿಸ್ಕೊಡಿ’ ಅಂತ ಗೌಡ್ರ ಕೈಕಾಲಿಡುದ್ರಂತೆ. ಆ ಊರ್ಗೌಡ್ರು ಪಾಪ ಒಳ್ಳೇ ಮನ್ಸ. ಗಂಡ ಹೆಂಡ್ತಿ ಇಬ್ಬರನ್ನೂ ಕೂರಿಸಿ ಅವರಟ್ಟಿಲೇ ಊಟುಕ್ಕಾಕ್ಸಿ, ಅದೆಲ್ಲೋ ದನ ಕರಿಗೆ ಹೋಗಿದ್ದ ಆ ಹುಡುಗುನ್ ಕರ್ದು ಅವರನ್ನ ತೋರಿಸಿ, ‘ಏ ಮರಿ ಇವರ್ಯಾರ್ಲಾ’ ಅಂತ ಕೇಳಿದ್ರಂತೆ. ಅವರಿಬ್ಬರನ್ನೂ ನೋಡಿದ ತಕ್ಷಣಕ್ಕೆ ಆ ಹುಡುಗ ನಮ್ಮವ್ವ ನಮ್ಮಪ್ಪ ಅಂತಂತೆ. ಐದಾರು ವರ್ಷಗಳಿಂದ ಕಾಣೆಯಾಗಿದ್ದ ಮಗನನ್ನು ಹುಡುಕುಡುಕಿ ಸಾಕಾಗಿದ್ದ ತಂದೆ ತಾಯಿಗಳು ಓಡಿ ಹೋಗಿ ತಬ್ಬಿಕೊಂಡು ದುಃಖತಪ್ತರಾಗಿ ಅಳುತ್ತಾ ಮಾತೇ ಹೊರಡದವಂತೆ ದಿಗ್ಮೂಢಳಾಗಿ ನಿಂತಿದ್ದನ್ನ ನೋಡಿದ ಗೌಡರು ಮೂಕವಿಸ್ಮಿತರಾದರು.

ಹೆತ್ತ ಕರುಳ ದುಃಖ ನೀರಾಗಿ ಹರಿದುದನ್ನು ನೋಡಿದ ಗೌಡರ ಮನ ಕಲಕಿತು. ಗಳಗಳ ಅತ್ತ ತಾಯಿಯನ್ನು ನೋಡಿ, ‘ಎಷ್ಟೇ ಆದರೂ ಅವರವರ ಕರಳು ಅವರನ್ನ ಬಿಡುತ್ತ’ ಅಂದ ಗೌಡರು, ‘ಆಯಿತು ಬಿಡಮ್ಮ, ಯಂಗೋ ನಿನ್ನ ಮಗ ನಿನ್ನ ಕೈಗೆ ಸಿಕ್ಕಿದ್ದಾನಲ್ಲ. ಮತ್ಯಾಕಳ್ತೀಯ’ ಅಂತ ಸಮಾಧಾನ ಹೇಳಿ, ‘ಲೇ ಮರಿ ಹೋಗಲ ನಿಮ್ಮವ್ವ ನಿಮ್ಮಪ್ಪನ ಜೊತಿಗೆ’ ಅಂದೋರು, ಆ ಹುಡುಗುನ್ಗೆ ಕೈಗೆ ಕಾಸ್ ಕೊಡಕೆ ಚಡ್ಡಿ ಜೋಬಿಗೆ ಕೈ ಹಾಕಲು ಹೋದರಂತೆ. ಅದನ್ನ ನೋಡಿದ ಆ ಹುಡುಗ ‘ನಾನೋಗಲ್ಲ ನಾನೋಗಲ್ಲ’ ಅಂತ ಕತ್ತಲ್ಲಾಡಿಸುತ್ತಾ ಗೌಡ್ರ ಮನೆ ಒಳಗೆ ಓಡೋಗ್ಬುಡ್ತಂತೆ.

ಗೌಡ್ರು ಹುಸಿ ನಗೆ ನಕ್ಕು ‘ಬಾರ್ಲಾ ಇಲ್ಲಿ, ಬಾ, ಬಾ’ ಅಂತ ಹಿಂದ್ಗುಟ್ಟೆ ಕೂಕ್ಕಂಡೋದ್ರಂತೆ. ಎಷ್ಟೇ

